



# ನಿರ್ದೇಶನಕ್ಕೆ ಸಿದ್ಧನಾಗುವೆ

**ಗೌತಮ್**

ಸ್ಟಾರ್‌ಸುವರ್ಣ 'ಸಿಂಧೂರ'ದ ಗೌರವ್

★ *ಗೌರವ್ ತುಂಬಾ ಗೌರವ ಪಾತ್ರ. ನೀವೂ ಹಾಗೇನಾ?*

ಒಂದು ರೀತಿಯಲ್ಲಿ ಹಾಗೆ ಇದ್ದೇನೆ. ನಮ್ಮ ಮನೆಯಲ್ಲಿಯೂ ತಾಯಿಯ ಮುದ್ದಿನ ಮಗ ನಾನು. ಧಾರಾವಾಹಿಯಲ್ಲೂ ಕೂಡ. ಎರಡೂ ಕಡೆ ನನ್ನ ಮಾತಿಗೆ ಮಾನ್ಯತೆ ಇದ್ದೇ ಇದೆ. ಆದರೆ ಧಾರಾವಾಹಿಯಷ್ಟು ಸೌಮ್ಯ ಸ್ವಭಾವ ನನ್ನದಲ್ಲ. ಸ್ವಲ್ಪ ಕಿಲಾಡಿತನವೂ ಇದೆ, ಗೌರವ್ ದೊಡ್ಡ ಕುಟುಂಬದ ಹುಡುಗ. ರಾಜರಾಜೇಶ್ವರಿ ಅವರ ದೊಡ್ಡ ಮಗ. ಮನೆಯಲ್ಲಿ ತಾಯಿಯದೇ ಯಜಮಾನಿಕೆ. ಪ್ರೀತಂ ಎಂಬ ತಮ್ಮನಿದ್ದಾನೆ. ಅವನು ಸಿಕ್ಕಾಪಟ್ಟೆ ತರ್ಲೆ. ಹಾಗಾಗಿ ತಾಯಿ ನನ್ನ ಮೇಲೆ ಜಾಸ್ತಿ ವಿಶ್ವಾಸ ಇಟ್ಟಿದ್ದಾಳೆ. ನಾನಂತೂ ತುಂಬಾ ಒಳ್ಳೆಯ ಹುಡುಗ. ಆದರ್ಶ ಗುಣಗಳ ಮೊತ್ತದಂತಿದೆ ಗೌರವ್ ಪಾತ್ರ. ಪ್ರತಿಯೊಬ್ಬರಿಗೂ ಗೌರವದಿಂದ ನಡೆದುಕೊಳ್ಳುತ್ತೇನೆ. ಒಟ್ಟಾರೆ ಸದ್ಗುಣ ಇರುವ ವ್ಯಕ್ತಿ. ಅದಕ್ಕೆ ನನ್ನನ್ನು ಅಮ್ಮ ತುಂಬಾ ಇಷ್ಟಪಡುತ್ತಾರೆ.

★ *ಸಮಾನ ಗುಣಗಳ ಪಾತ್ರ ನಿರ್ವಹಣೆ ಸುಲಭ ಅಲ್ವಾ?*

ಬಾಡಿ ಲಾಂಗ್ವೇಜ್‌ಗೆ ಕಷ್ಟಪಡಬೇಕಾಗಿಲ್ಲ. ಸ್ವಲ್ಪ ಅನುಕೂಲ ಅನ್ನಿಸುತ್ತದೆ. ಆದರೆ ಡೈಲಾಗ್‌ಗೆ ಹೊಂದಿಕೊಳ್ಳಲು ತಾಲೀಮು ಬೇಕಾಗುತ್ತದೆ. ಸುಮಾರು ಸಂದರ್ಭದಲ್ಲಿ ಪಾತ್ರಗಳನ್ನು ರೂಪಿಸುವಾಗ ನಟರ ಸ್ವಭಾವವನ್ನೂ ಪರಿಗಣಿಸಲಾಗುತ್ತದೆ ಎಂದು ನಾನು ಭಾವಿಸಿದ್ದೇನೆ. ನನಗೂ ಈ ಪಾತ್ರದ ಸ್ವಭಾವದ ಬಗ್ಗೆ ಹೋಲಿಸಿದಾಗ ಒಂದಿಷ್ಟು ಸಾಮ್ಯತೆ ಇದೆ ಅಂತ ಅನ್ನಿಸಿದೆ.

★ *ಎಂಜಿನಿಯರಿಂಗ್ ಮುಗಿಸಿಕೊಂಡು ವೃತ್ತಿಯನ್ನು ಬದಲಾಯಿಸಿದೆ ಎನ್ನುವ ಕೊರಗು ಇದೆಯಾ?*

ನಾನು ಏನೇ ಮಾಡಿದರೂ ಅದರಿಂದ ಆಗುವ ಪರಿಣಾಮಕ್ಕೆ ನಾನೇ ಹೊಣೆ. ಆ ಕಾರಣಕ್ಕೆ ಈ ಬಗ್ಗೆ ನನಗೆ ಏನೂ ಬೇಸರವಾಗಲಿ, ಕೊರಗಾಗಲಿ ಇಲ್ಲ. ಓದಿದ್ದೂ ಉತ್ತೀರ್ಣನಾಗುತ್ತ ಮುಂದಿನ ತರಗತಿಗೆ ಹೋದಂತೆ ಅಷ್ಟೆ. ಅಂದರೆ ಒಂದನೇ ತರಗತಿ ಪಾಸಾಗಿ 2ನೇ ತರಗತಿಗೆ ಹೋದಂತೆ. ಎಸ್ಸೆಸ್ಸೆಲ್ಸಿ ನಂತರ ವಿಜ್ಞಾನ ತೆಗೆದುಕೊಂಡೆ. ಎಂಜಿನಿಯರಿಂಗ್ ಸೀಟ್ ಸಿಕ್ಕಿತು. ಅದನ್ನೂ ಮಾಡಿದೆ. ನಟನೆಯ ಬಗ್ಗೆ ಪ್ಯಾಶನ್ ಇತ್ತು. ಅದನ್ನು ಮುಂದುವರಿಸುತ್ತಿದ್ದೇನೆ. ಒಳ್ಳೆಯ ನಟನಾಗಬೇಕು, ನಿರ್ದೇಶಕನಾಗಬೇಕು ಎನ್ನುವ ಕನಸುಗಳು ನನ್ನಲ್ಲಿವೆ. ಬಾಹುಬಲಿ ಅಂತಹ ಜನಪ್ರಿಯ ಸಿನಿಮಾನೇ ನೀಡಬಹುದು. ಇಲ್ಲ ಕನಿಷ್ಠ ಸಿನಿಮಾನೇ ನೀಡಬಹುದು. ಆದರೆ ನಟನಾಗಿ ಸಮತೋಲನವನ್ನು ಕಾಪಾಡಬೇಕು. ತಿಂಗಳ ನಿಗದಿತ ಸಂಬಳದ ಕೆಲಸ ಬಿಟ್ಟು ಬಂದಿದ್ದೇನೆ. ಇಲ್ಲಿ ಅನಿಯಮಿತ ಆದಾಯ ಇರುವುದೂ ನಿಜ. ಆದರೆ ಜೀವನ ನಿರ್ವಹಣೆಯಾದರೆ ಸಾಕು ಎನ್ನುವುದು ಮಾತ್ರ ನನ್ನ ಆಸೆ. ನನ್ನಲ್ಲಿ ವೃತ್ತಿಪರತೆಯಿದೆ. ಖುಷಿಯಾಗಿ ಇದ್ದೇನೆ. ನನ್ನ ಕ್ಷೇತ್ರದಲ್ಲಿ ನಾನಿರುವುದರಿಂದ ಶ್ರಮಿಸುತ್ತಿದ್ದೇನೆ, ಕಷ್ಟಪಡುತ್ತಿದ್ದೇನೆ ಅಂತ ನನಗೆ ಅನ್ನಿಸುವುದಿಲ್ಲ. ಆರಾಮಾಗಿಯೇ ಇದ್ದೇನೆ. ಹಗಲು ರಾತ್ರಿಗಳನ್ನು ನಟನೆಯಲ್ಲೇ ಕಳೆದರೂ ನನಗೆ ಸುಸ್ತು ಎನ್ನಿಸುವುದಿಲ್ಲ. ಇಂತಹ ತೃಪ್ತಿಯ ಭಾವ ಸಾಕು.

★ *ಹಾಗಾದರೆ ನಿಮ್ಮಲ್ಲಿದ್ದ ನಟನಾ ಗೀಳಿನ ಬಗ್ಗೆ ಹೇಳಿ*

ತಮಾಷೆಯ ಮನೋಭಾವದಲ್ಲಿ ನಾನು ಮಿಮಿಕ್ರಿ ಮಾಡುತ್ತಿದ್ದೆ. ನನ್ನನ್ನೂ ಕಾಡಿಸಲೆಂದೋ, ಖುಷಿಯಿಂದಲೋ ಯಾರಾದರೂ ಸರಿ ಯಾರದ್ದೇ ಅಣಕು ತೋರಿಸು ಎಂದರೆ ಹಾಗೆಯೇ ಮಾಡುತ್ತಿದ್ದೆ. ಅದರಲ್ಲೂ ರಾಜ್‌ಕುಮಾರ್, ಶಾರುಕ್ ಖಾನ್ ನನ್ನ ನೆಚ್ಚಿನ ನಟರು. ಒಮ್ಮೆ ಸಿನಿಮಾ ನೋಡಿದರೆ ಸಾಕು ಅವರಂತೆಯೇ ಅಣಕ ಮಾಡುತ್ತಿದ್ದೆ. ಆಗ ನನಗೆ ಇದನ್ನು ವೃತ್ತಿಯಾಗಿ ತೆಗೆದುಕೊಳ್ಳಬಹುದು ಎಂದು ಅನ್ನಿಸಿರಲಿಲ್ಲ. ಎಲ್ಲರ ಖುಷಿಗಾಗಿ ಅದನ್ನು ಮಾಡುತ್ತಿದ್ದೆ.

★ *ಕ್ಯಾಮೆರಾ ಹುಚ್ಚು ಹುಟ್ಟಿದ್ದಾದರೂ ಹೇಗೆ?*

ಹವ್ಯಾಸಿ ಗಾಯಕ ನಾನು. ಅದು ನನ್ನನ್ನು ವೇದಿಕೆಯನ್ನು ಹತ್ತಿಸಿತು. ಹಾಗೆ ಅದು ನಾಟಕ ಆಡುವಂತೆ ಪ್ರೇರಣೆ ನೀಡಿತು. 2010ರಲ್ಲಿ ಸ್ನೇಹಿತರ ಜೊತೆಗೂಡಿ ಕಿರು ಚಿತ್ರ ಮಾಡಿ ಯೂಟ್ಯೂಬ್‌ಗೆ ಅಪ್‌ಲೋಡ್ ಮಾಡಲು ಆರಂಭಿಸಿದೆ. 'ಮುಗುಳುನಗೆ' ಮೊದಲ ಕಿರುಚಿತ್ರ. ಇನ್ನೂ ಸ್ಮಾರ್ಟ್‌ಫೋನ್ ಜನಪ್ರಿಯ ಆಗದ ಆ ಕಾಲದಲ್ಲಿ ನನ್ನ ಯೂಟ್ಯೂಬ್ ಚಿತ್ರವನ್ನು 15 ಸಾವಿರ ಮಂದಿ ವೀಕ್ಷಿಸಿದ್ದರು. ಅದು ಅಂತಹ ಹಲವು ಕಿರುಚಿತ್ರಗಳಿಗೆ ಕಾರಣವಾಯಿತು. ಅದರಿಂದ ನಟನಾಗಲೇಬೇಕು ಎಂಬ ಹಟ ಹುಟ್ಟಿತು. 'ಅನೇಕ' 'ಅಭಿನಯ ತರಂಗ' ರಂಗತಂಡಗಳಲ್ಲಿ ನಾಟಕವನ್ನು ಆಡಲು ಶುರುಮಾಡಿದೆ. ಅಲ್ಲಿ ನಟನಾಗಿ ಗುರುತಿಸಿಕೊಂಡಿದ್ದರಿಂದ 'ಉಗ್ರಂ' ಸಿನಿಮಾದಲ್ಲಿ ಒಂದು ಪುಟ್ಟ ಪಾತ್ರವನ್ನು ನಿರ್ವಹಿಸಿದೆ. ಅದರ ಪರಿಣಾಮ 'ರಾಜಧಾನಿ'ಯಲ್ಲಿ ಖಳನಾಯಕನ ಪಾತ್ರ ಮಾಡಿದೆ. 'ಪ್ರೇಮ ಗೀಮಾ ಜಾನೆದೋ'ದಲ್ಲಿ ನಾಯಕನಾಗಿ ನಟಿಸಿದೆ. 'ಸಿಂಧೂರ' ಮೊದಲ ಧಾರಾವಾಹಿ. ಮುಂದೆ ನಿರ್ದೇಶಕನಾಗುವ ಕನಸೂ ಇದೆ. ಅದಕ್ಕೂ ತಯಾರಾಗಿದ್ದೇನೆ.

■ ರಾಗು